ಅಧ್ಯಕ್ಷರು : ಆ ಸಮಿತಿಯು ಅಸ್ತಿತ್ವದಲ್ಲಿದೆ. ಅದಕ್ಕೆ ಟೈಂ ಎಕ್ಸ್‌ಟೆನ್‌ಷನ್ ಮಾಡಬೇಕೆಂದು ಅಧ್ಯಕ್ಷರು ನನಗೆ ಬರೆದು ಕಳುಹಿಸಿದ್ದಾರೆ. ನಾನು ಅದನ್ನು ಕನ್ಸಿಡರ್ ಮಾಡುತ್ತಿದ್ದೇನೆ.

ತುಂಗಭದ್ರಾ ನದಿಯಿಂದ ಏತನೀರಾವರಿ ಯೋಜನೆ ಕೈಗೊಳ್ಳುವ ಬಗ್ಗೆ

ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ತಿಳಿದಿರುವಂತೆ ನಮ್ಮ ತುಂಗಭದ್ರಾ ನೀರಾವರಿ ಯೋಜನೆ ಸುಮಾರು ಆರು ಲಕ್ಷ ಎಕರೆ ರೈತರಿಗೆ ಅನುಕೂಲ ಮಾಡಿ ಕೊಡತಕ್ಕಂಥ ಯೋಜನೆಯಾಗಿದೆ. ಇದನ್ನು ದಿವಂಗತ ವಿಶ್ವೇಶ್ವರಯ್ಯನವರು ಬಹಳ ಚೆನ್ನಾಗಿ ಕಟ್ಟಿ ಪ್ರೊಟೆಕ್ಟೆಡ್ ಏರಿಯಾ ಎಂದು ಮಾಡಿ, ನೀರು ಕುಡಿಯುವುದಕ್ಕೆ ಮತ್ತು ಅಲ್ಪಸ್ವಲ್ಪ ಕೃಷಿಗೆ ನೀರಾವರಿಯಾಗ ಬೇಕೆಂದು ಮಾಡಿದ್ದರು. ಇದು ಕನ್ನಡ ನಾಡಿನ ಬಹಳ ಹಳೆಯ ನೀರಾವರಿ ಯೋಜನೆಯಾಗಿದೆ. ಇವೊತ್ತಿನ ವರೆಗೆ ಈ ನೀರಾವರಿ ಯೋಜನೆಗೆ ಯಾವುದೇ ತರಹದ ಮಾದರಿಕ ಯೋಜನೆಗಳನ್ನು ಮತ್ತು ಮಾಡರ್‌ನೈಸೇಶನ್ ಯೋಜನೆಗಳನ್ನು ಸರಕಾರ ಮಾಡಿಲ್ಲ. ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಬಳ್ಳಾರಿ ಮತ್ತು ಶಿರಗುಪ್ಪ ತಾಲ್ಲೂಕುಗಳಲ್ಲಿ ಹೆಚ್ಚಿನ ಭಾಗಗಳು ಈ ನೀರಾವರಿಯನ್ನು ಪಡೆದಿದೆ. ಈ ಬಗ್ಗೆ ನಾವು ಸರಕಾರಕ್ಕೆ ಬಹಳ ಒತ್ತಡವನ್ನು ತಂದಿದ್ದೇವೆ. ಇದರ ಬಗ್ಗೆ ಮಾನ್ಯ ಸಚಿವರು ಕೂಡ ಗಡಿಬಿಡಿಯಲ್ಲಿ ಒಂದು ದಿನ ಬಂದರು. ಆದರೂ ಕೂಡ ಕಳೆದ ಮೂರು ವರ್ಷಗಳಿಂದಲೂ ಈ ಬಗ್ಗೆ ಮಲತಾಯಿ ಧೋರಣೆ ತೋರಿಸುತ್ತಿದ್ದೀರಿ ಎಂದು ಹೇಳಬೇಕಾಗುತ್ತದೆ. ಇವೊತ್ತು ಬಹಳಷ್ಟು ನೀರು ಆಂಧ್ರಪ್ರದೇಶಕ್ಕೆ ಹೆಚ್ಚಾಗಿ ಹೋಗುತ್ತಿದೆ. ಇವೊತ್ತು ಸಬ್‌ಕೆನಾಲ್ಸ್, ಮೆಯಿನ್ ಕೆನಾಲ್ಸ್, ಗಳಲ್ಲಿ ಸಿಲ್ಟ್ ತೆಗೆದಿಲ್ಲ, ಲೈನಿಂಗ್ ಮಾಡಿಸಿಲ್ಲ. ಹೀಗಾಗಿ ಸೀಪೇಜ್ ಆಗಿ ನೀರು ಸರಿಯಾಗಿ ಡಿಸ್‌ಚಾರ್ಜ್ ಆಗುತ್ತಾ ಇಲ್ಲ. ಡಿಸ್‌ಚಾರ್ಜ್ ಕಡಿಮೆ ಆಗಿರುವುದರಿಂದ ಟೇಲ್ ಎಂಡ್ ನಲ್ಲಿರುವ ನಮಗೆ ನೀರು ಮುಟ್ಟಾತ್ತಾ ಇಲ್ಲ. ಇವೊತ್ತು ಕೊನೆಯ ರೈತರಿಗೆ ನೀರು ತಲುಪಲು ಒಂದು ತಿಂಗಳು ಬೇಕಾಗುತ್ತದೆ. ಮೊದಲನೇ ಭಾಗದಲ್ಲಿರುವಂತಹ ರೈತರು ತಿಂಗಳಿಗೆ ಎರಡು ಮೂರು ಸಾರಿ ನೀರು ತೆಗೆದುಕೊಂಡರೆ ಕೊನೆಯಲ್ಲಿ ಇರುವ ರೈತರಿಗೆ ನೀರು ಮುಟ್ಟಲು ಒಂದು ತಿಂಗಳು ಬೇಕಾಗುತ್ತದೆ. ಇದರಿಂದಾಗಿ ಕೊನೆಯಲ್ಲಿರುವ 25 ಪರ್ಸೆಂಟ್‌ನಷ್ಟು ರೈತರಿಗೆ ನೀರು ಸಿಗುತ್ತಾ ಇಲ್ಲ. ಇದಕ್ಕೆ ಲೈನಿಂಗ್ ತಾವು ಮಾಡಿಲ್ಲ, ವಿಶೇಷತಃ ಹೆಚ್ ಎಲ್ ಸಿ ಹೈಲೆವೆಲ್ ಕೆನಾಲ್ ರೈಟ್ ಸೈಡ್ ಮತ್ತು ಎಲ್ ಎಲ್ ಸಿ ರೈಟ್ ಸೈಡ್ ಇದೆ. ಇವುಗಳಿಗೆ ಯಾವ ತರಹದ ಯೋಜನೆಗಳೂ ಆಗಿಲ್ಲ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ. ಮಾಮನಿ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇಲ್ಲಿ ಬಹಳಷ್ಟು ಪಿಕ್ಸ್‌ಅಪ್ಸ್ ಆಗಿದ್ದಾವೆ. ಏತನೀರಾವರಿ ಯೋಜನೆಗಳು ಇದ್ದಾವೆ. ಇದರ ಬಗ್ಗೆ ಸರಕಾರವು ಏನೂ ಮಾಡುತ್ತಾ ಇಲ್ಲ. ನಮ್ಮಲ್ಲಿ ಹಗರಿ ನದಿ ಎಂದು ಇದೆ. ಈ ನದಿಯಿಂದ ಮತ್ತು ತುಂಗಭದ್ರಾ ನದಿಯಿಂದ ಹರಿದು ಹೋಗತಕ್ಕ ನೀರು ಆಂಧ್ರಪ್ರದೇಶಕ್ಕೆ ಹೋಗುತ್ತದೆ. ಇಲ್ಲಿ ಒಂದು ಲಿಫ್ಟ್ ಇರಿಗೇಷನ್ ಸ್ಕೀಂ ಮಾಡಿ ಎಂದು ಸುಮಾರು ನಾಲ್ಕು ವರ್ಷಗಳಿಂದ ಸರಕಾರವನ್ನು ಕೇಳುತ್ತಿದ್ದೇನೆ. ಅದರ ಬಗ್ಗೆ ಸರಕಾರದವರು ಮಲತಾಯಿ ಧೋರಣೆಯನ್ನು ಯಾಕೆ ತೋರಿಸುತ್ತಿದ್ದಾರೆ

ಎಂದು ಅರ್ಥವಾಗುತ್ತಿಲ್ಲ. ಇವೊತ್ತು 8ಸಾವಿರ ಎಕರೆ ಪ್ರದೇಶವು ಕೇವಲ10ಕೋಟಿ ರೂಪಾಯಿಗಳೊಳಗೆ ಅಂದರೆ ಒಂದು ಎಕರೆಗೆ 15ರಿಂದ 20 ಸಾವಿರ ರೂಪಾಯಿಗಳೊಳಗೆ ನೀರಾವರಿ ಆಗುತ್ತದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಗಡಿಭಾಗದಲ್ಲಿ ಜನರು ಕೂಗು ಕೇಳಿಬರುತ್ತಿದೆ ಎಂಬುದಕ್ಕೆ ಇದೊಂದು ಉದಾಹರಣೆಯಾಗುತ್ತದೆ. ಕಳೆದ ಮೂರು ವರ್ಷಗಳಿಂದ ಹನ್ನೆರಡೂವರೆ ಸಾವಿರ ಎಕರೆ ಪ್ರದೇಶವನ್ನು ನೀರಾವರಿ ಮಾಡಬೇಕಾದುದ್ದನ್ನು ಸರಕಾರದವರು ಯಾಕೆ ಬಿಟ್ಟಿದ್ದಾರೆ ಎಂಬುದನ್ನು ಹೇಳಬೇಕು. ಒಂದೊಂದು ಎಕರೆಗೆ 50-60 ಸಾವಿರ ರೂ.ಗಳ ಪ್ರಕಾರ ನೀರಾವರಿ ಮಾಡಲು ಸ್ಕೀಂಗಳನ್ನು ಮಾಡಿದ್ದಾರೆ. ನಮಗೆ ಯಾಕೆ ಈ ಸೌಲಭ್ಯವನ್ನು ಮಾಡಿಕೊಟ್ಟಿಲ್ಲ ಎಂಬ ಬಗ್ಗೆ ಹೇಳಬೇಕು.

ಶ್ರೀ ಟಿ.ಎಂ. ಚಂದ್ರಶೇಖರಯ್ಯ (ಸಿರಗುಪ್ಪ) : ಈ ಪ್ರದೇಶದ ಕೊನೆಯ ಭಾಗದ ರೈತರಿಗೆ ಅದರ ಪ್ರಯೋಜನ ಸಿಗದ ಹಾಗೆ ಆಗಿ ಪ್ರತಿ ವರ್ಷವೂ ಅವರು ಹಾಕಿದ ಬೆಳೆಗೆ ಕೊನೆಯ ಹಂತದಲ್ಲಿ ನೀರು ಸಿಗದ ಹಾಕಿದ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಾ ಇದೆ. ಮಾನ್ಯ ನೀರಾವರಿ ಸಚಿವರು ಬಳ್ಳಾರಿಗೆ ಬಂದಾಗ ಲಿಫ್ಟ್ ಇರಿಗೇಷನ್ ಸ್ಕೀಂ ಮುಂತಾಗಿ ಸೌಲಭ್ಯಗಳನ್ನು ಮಾಡಿಕೊಡಬೇಕೆಂದು ಆದೇಶವನ್ನು ಕೊಟ್ಟಿದ್ದರು. ಅದು ಇದುವರೆವಿಗೂ ಕಾರ್ಯಗತ ಆಗುತ್ತಾ ಇಲ್ಲ. ಹೋದ ವರ್ಷ ತೆಗೆದುಕೊಂಡ ಹಾಗೆ ರಿಪೇರಿ ಕಾರ್ಯಗಳನ್ನು ಈ ವರ್ಷವೂ ತೆಗೆದುಕೊಳ್ಳಬೇಕಾಗುತ್ತದೆ. ಸರಕಾರದವರು ಅದಕ್ಕೆ ಹಣವನ್ನು ಒದಗಿಸಿಲ್ಲ. ಈ 24 ಟಿಎಂಸಿ ನೀರು ಇರುವ ಹೂಳು ತುಂಬಿರುವ ಜಲಾಶಯದ ಬದಲಿಗೆ ಬ್ಯಾಲನ್ಸಿಂಗ್ ರಿಸರ್ ವಾಯರ್ ಮಾಡುವ ಬಗ್ಗೆಯೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಅಲ್ಲಿ ಅವಶ್ಯವಿರುವ ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡು ಆ ಭಾಗದ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅಲ್ಲಂ ವೀರಭದ್ರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಯವರು ಬಳ್ಳಾರಿಗೆ ಬಂದಿದ್ದರು. ಆಗ ನಾವು ಇದೇನು ಎಲೆಕ್ಷನ್ ಸ್ಟಂಟೇ ಅಥವಾ ಬಳ್ಳಾರಿ ಜಿಲ್ಲೆಯ ಸಮಸ್ಯೆಗಳನ್ನು ರಿವ್ಯೂ ಮಾಡಲು ಬಂದಿದ್ದರಾ ಎಂದು ಕೇಳಿದ್ದೆವು. ಈ ಕುರಿತು ಪರಿಹಾರ ಕಂಡುಕೊಳ್ಳಲು ಒಬ್ಬ ಐಎಎಸ್ ಅಧಿಕಾರಿಯನ್ನು ನೇಮಕ ಮಾಡುವುದಾಗಿ ಹೇಳಿದ್ದರು. ಮಾನ್ಯ ಐಎಎಸ್ ಅಧಿಕಾರಿ ಸಿದ್ಧರಾಮಯ್ಯನವರೂ ಕೂಡ ಅಂದು ಬಂದಿದ್ದರು. ಇದನ್ನೆಲ್ಲಾ ದಾಖಲು ಮಾಡಿದ್ದರು. ಆದರೆ ಇದು ಆಗಿ ಎರಡು ವರ್ಷಗಳಾಯಿತು. ಆದ್ದರಿಂದ ಈ ಯೋಜನೆಗಳಿಗೆ ಮಂಜೂರಾತಿ ಕೊಟ್ಟು ನಮಗೆ ಅನುಕೂಲ ಮಾಡಿಕೊಡಬೇಕಾಗಿ ಕೇಳಿ ಕೊಳುತ್ತೇನೆ.

+ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೇ, ನೇರವಾಗಿ ಹೇಳುವುದಾದರೆ, ವೈ ಕಗ್ಗಲ ಏತ ನೀರಾವರಿಯ 14 ಕೋಟಿ ರೂಪಾಯಿಗಳ ಯೋಜನೆಯಾಗಿದೆ. ಈ ಯೋಜನೆಗೆ ಜನರು ಸುಮಾರು 15 ವರ್ಷಗಳಿಂದ ಕೇಳುತ್ತಾ ಇದ್ದರು. ನಮ್ಮ ಅಲ್ಲಂವೀರಭದ್ರಪ್ಪನವರ ಕುಟುಂಬಸ್ಥರು ಮೆಂಬರ್ಸ್ ಆಗಿದ್ದಾಗಲೂ ಕೇಳುತ್ತಿದ್ದರೂ ಅವರು ಮಾಡಿರಲಿಲ್ಲ. ಈಗ ನಾವು ಟೆಕ್ನಿಕಲ್ ಕಮಿಟಿಯ ಅಪ್ರೂವಲ್ ಕೊಟ್ಟು ಎಂಐಪಿಸಿ ಬೋರ್ಡ್ ಅಪ್ರೊವಲ್ ಕೊಟ್ಟು, ಎಸ್ಟಿಮೇಟ್ ಮಾಡಿ, ಸರ್ವೇ ಮಾಡಿ, ಕ್ಯಾಬಿನೆಟ್ ಮುಂದೆ ಬರುತ್ತಾ ಇದೆ. Atleast give me an

appreciation. Since 20 years this Y. Kaggal Lift Irrigation Project was in cold storage. You are a learned Member. I am not criticising. You know the procedure of the Government.

ಶ್ರೀ ಅಲ್ಲಂ ವೀರಭದ್ರಪ್ಪ : ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಸನ್ಮಾನ್ಯ ಮಾಡುತ್ತೇವೆ.

SRI K. NAGEGOWDA : We know that seriously. ಟೆಕ್ನಿಕಲ್ ಕಮಿಟಿಗೆ ಬರಬೇಕಾದರೆ ಐದಾರು ತಿಂಗಳು ಎಲ್ಲಾ ಕೆಲಸ ಮುಗಿದು ಬರಬೇಕು. ಆ ದಾಖಲೆಗಳ ಹಿಂದೆ ನಿಂತು ಕೆಲಸ ಮಾಡಿದ್ದಾರೆ. ಎಲ್ಲಾ ಆಗಿ ಸಚಿವಸಂಪುಟದ ಮುಂದೆ ಬರುತ್ತಾ ಇದೆ. ಅಲ್ಲಿ ಅಪ್ರೂವ್ ಮಾಡಿಸಿಕೊಡುತ್ತೇನೆ. ವಿಷಯದ ಗಂಭೀರತೆಯನ್ನು ನಾವು ಅರಿತಿದ್ದೇವೆ. ಫೈನಾನ್ಸ್ ಡಿಪಾರ್ಟ್‌ಮೆಂಟಿನ ಒಪ್ಪಿಗೆ ಬಂದ ಕೂಡಲೇ ಸಚಿವಸಂಪುಟದಲ್ಲಿ ಒಪ್ಪಿಗೆ ಪಡೆಯುವ ಕೆಲಸವನ್ನು ಮಾಡುತ್ತೇನೆ.

SRI. ALLAM VEERABHADRAPPA : On lining you are spending so many crores in this area and that area. You give to this side also.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಚಂದ್ರಶೇಖರಯ್ಯನವರು ಹೇಳಿದ ಹಾಗೆ, ಒಂದು ಕೋಲಾರ ಲಿಫ್ಟ್ ಇರಿಗೇಷನ್, ಇನ್ನೊಂದು ಕಡೂರು ಲಿಫ್ಟ್ ಇರಿಗೇಷನ್. ಒಂದೂವರೆ ಕೋಟಿ ರೂಪಾಯಿಗಳಂತೆ ಒಟ್ಟು ಮೂರು ಕೋಟಿ ರೂಪಾಯಿಗಳಿಗೆ ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟಿದ್ದೇವೆ. ಕೆಲಸವನ್ನು ಮಾಡಿಸುತ್ತೇನೆ. ಅವರು ಕೇಳಿದ ಎರಡು ಕೆಲಸವನ್ನೂ ಮಾಡುತ್ತೇವೆ. ಮತ್ತು ಪಿಕ್ ಅಪ್ಸ್ ಇದಕ್ಕೆಲ್ಲಾ ಹೆಚ್ ಎಲ್‌ಸಿಯಲ್ಲಿ ಕಮ್ಯಾಂಡ್ ಏರಿಯಾದಲ್ಲಿ ಟೇಲ್ ಎಂಡ್ಸ್ ಸ್ಟಬಿಲೈಸ್ ಮಾಡುವುದಕ್ಕೆ ಮೂರು ಕೋಟಿ has been made the allotment for pick up and stabilisation. ಅದನ್ನೂ ಸಹ ಈ ವರ್ಷ ಕೈಗೆ ತೆಗೆದುಕೊಳ್ಳುತ್ತೇವೆ. ಮೇಜರ್ ಆಗಿ ಲೈನಿಂಗ್ ಬಗ್ಗೆ ಹೇಳುವುದಾದರೆ ನನಗೆ ಗೊತ್ತಿದೆ ಬಳ್ಳಾರಿ ಭಾಗದಲ್ಲಿ ತಾವು ನೋಡಿದ್ದೀರಿ, ನಾನೂ ನೋಡಿದ್ದೇನೆ. ಲಾಸ್ಟ್ ಟೈಲ್ ಎಂಡ್‌ಸ್‌ಗೆ ಬಹಳಷ್ಟು ತೊಂದರೆ ಇದೆ. ಬಹಳಷ್ಟು ರೈತರು ನೀರಿಗೋಸ್ಕರ ಪರದಾಡುತ್ತಾರೆ. ಅಲ್ಲಿ ದೊಡ್ಡ ದೊಡ್ಡ ಬೆಳೆಗಳು, ಮೆಣಸಿನಕಾಯಿ ಈ ರೀತಿ ಕಮರ್ಷಿಯಲ್ ಕ್ರಾಪ್‌ಗಳಿವೆ. ಭತ್ತ ಇದೆ. ಅದಕ್ಕೋಸ್ಕರ ನಾವು ಡಬ್ಲ್ಯೂ.ಆರ್.ಸಿ.ಸಿ. ಒಳಗೆ improvement of Tungabhadra Left Bank ಪ್ರಾಜೆಕ್ಟ್ ಒಳಗಡೆ 281 ಕೋಟಿ 36 ಲಕ್ಷ ರೂಪಾಯಿಗಳನ್ನು ಇಟ್ಟು ಸ್ಟೇಟ್ ಲೆವೆಲ್ ಕೋ-ಆರ್ಡಿನೇಷನ್ ಕಮಿಟಿಯವರು ರೀಹ್ಯಾಬಿಲಿಟೇಷನ್‌ಗೆ ಆರ್ಡರ್ ಮಾಡಿದ್ದಾರೆ. ಇದರಲ್ಲಿ ನಿಮ್ಮ ಹೆಚ್‌ಎಲ್‌ಸಿಗೆ32 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ.32 ಕೋಟಿ ರೂಪಾಯಿಯಲ್ಲಿ ಲೈನಿಂಗ್, ಸ್ಟೆಬಿಲೈಜೇಷನ್, ಇಂಪ್ರೂಮೆಂಟ್ಸ್ ಎಲ್ಲಾ ಸೇರಿವೆ. 281 ಕೋಟಿ ರೂಪಾಯಿಗಳಿಗೆ ಡಬ್ಲ್ಯೂ.ಆರ್.ಸಿ.ಸಿ ಪ್ರಾವಿಷನನ್ನು ಹಾಕಿದ್ದೇವೆ. ನನಗೆ ಇದನ್ನೆಲ್ಲಾ ಓದುವುದಕ್ಕೆ ಟೈಮ್ ಇಲ್ಲ. ತಮಗೆ ಕಳುಹಿಸಿಕೊಡುತ್ತೇನೆ. ನೋಡಿ ಹೆಚ್.ಎಲ್.ಬಿ.ಸಿ ಮತ್ತು ಎಲ್.ಎಲ್.ಬಿ.ಸಿ. ಯನ್ನು ಪೂರ್ತಿಯಾಗಿ ನೆಗ್ಲೆಕ್ಟ್ ಮಾಡಿದ್ದಾರೆ. ಇಲ್ಲ ಎಂದು ನಾನು ಹೇಳುವುದಿಲ್ಲ. ತುಂಗಭದ್ರಾ ಬೇಸಿನ್ ಒಳಗೆ ಅಲ್ಲಿ ಆರು ಲಕ್ಷ ಎಕರೆ ಮತ್ತು ಮೂರುಕಾಲು ಲಕ್ಷ ಎಕರೆ ಎರಡಕ್ಕೂ 22ಟಿಎಂಸಿಯಷ್ಟು ಸಿಲ್ಟ್ ಇದೆ. ಅದನ್ನು ತೆಗೆಯಬೇಕೆಂದರೆ ಎಸ್ಟಿಮೇಟ್ಸ್ ಮಾಡಿಸಿದ್ದೇವೆ. 2500 ಕೋಟಿ ರೂಪಾಯಿಗಳು

ಬೇಕು. ಅದನ್ನು ತೆಗೆಯುವುದಕ್ಕಾಗುವುದಿಲ್ಲ. ಈಗ 2500 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ 22 ಟಿಎಂಸಿ ಸಿಲ್ಟನ್ನು ತೆಗೆಯುವುದಕ್ಕಾಗುವುದಿಲ್ಲ. ಡ್ಯಾಮನ್ನು ಇನ್‌ಕ್ರೀಸ್ ಮಾಡುವುದಕ್ಕಾಗುತ್ತದೆಯೇ ಎಂದು ತೋರಿಸಿದ್ದೇವೆ. ಅಮೇರಿಕನ್ ಇನ್ಸ್ ಟಿಟ್ಯೂಷನ್ ನಿಂದೆಲ್ಲಾ ಟೆಸ್ಟ್ ಮಾಡಿಸಿ ನೋಡಿದ್ದೇವೆ. ಅವರು ಆಗುವುದಿಲ್ಲ ಎಂದು ಹೇಳಿ ಸಬ್ ಮಿಟ್ ಮಾಡಿದ್ದಾರೆ. ವೈ.ಕೆ. ಮೂರ್ತಿ ಎಂದು ಹೇಳಿ ಡ್ಯಾಮ್ ಸೇಫ್ಟಿ ಕಮಿಟಿಯಲ್ಲಿ ಎಕ್ಸ್‌ಪರ್ಟ್ ಇದ್ದಾರೆ. ಆ ಎಕ್ಸ್‌ಪರ್ಟ್ಸ್‌ನ್ನು ಕಳುಹಿಸಿ ನಾವು ಟೆಸ್ಟ್ ಮಾಡಿಸುತ್ತಿದ್ದೇವೆ. ಏನಾದರೂ ಬೇರೆ ಮಾಡುವುದಕ್ಕಾಗತ್ತದೆಯೇ ಎಂದು ಕೇಳಿದ್ದಕ್ಕೆ ಅವರು ಆಗುವುದಿಲ್ಲ ಎಂದಿದ್ದಾರೆ. ಆದರೆ ತಾವು ಹೇಳಿದಂತೆ ಸಿಲ್ಟ್ ಮೇಲೆ ಬರುತ್ತಿದ್ದಂತೆ ನೀರು ತುಂಬುತ್ತಿದ್ದಂತೆ ರಿವರ್ಸ್ ಹೋಗಿ ಅದನ್ನು ಆಂಧ್ರದವರು ಉಪಯೋಗಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ನಾವು ಈಗ ರೈಟ್ಸ್ ಕಂಪನಿಯವರಿಗೆ ದೆಹಲಿಯಲ್ಲಿ ಆಥರೈಸ್ ಮಾಡಿ ಖಾಸಗಿಯವರಿಗೆ ಹೇಳಿ ಈ 21 ಟಿಎಂಸಿ ನೀರು ಏನು ಪಾಸ್ ಆಗುತ್ತದೆ, ಅದನ್ನು ಅರೆಸ್ಟ್ ಮಾಡಿ ಮತ್ತೆ ನಾವು ಇಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕೆ ಬ್ಯಾಲೆನ್ಸಿಂಗ್ ರಿಸರ್ವಾಯರ್ ಮಾಡುವ ಬಗ್ಗೆ ಎಲ್ಲಿ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡಬೇಕು. ಯಾವ ಕಡೆ ಮಾಡಬೇಕು. ಸಮತೋಲನ ಜಲಾಶಯಗಳನ್ನು ನಿರ್ಮಾಣ ಮಾಡುವುದಕ್ಕೆ ಟೆಕ್ನಿಕಲ್ ಫೀಸಿಬಿಲಿಟಿ ಬಗ್ಗೆ ದೆಹಲಿ ಕಮಿಟಿಗೆ ಒಂದೊವರೆ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿ ಈಗಾಗಲೇ ಅದನ್ನು ಇನ್‌ವೆಸ್ಟ್ ಮಾಡಿದ್ದೇವೆ. ಇನ್ನು ಐದಾರು ತಿಂಗಳ ಒಳಗಡೆ ತಾವು ಮುಂದಿನ ಅಧಿವೇಶನಕ್ಕೆ ಬರುವುದರೊಳಗೆ ಆ ಎಲ್ಲಾ ಪೇಪರನ್ನು ಕಂಪ್ಲೀಟ್ ಮಾಡಿ ಆ place identify ಮಾಡಿ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಮಾಡುತ್ತೇವೆ ಸ್ವಲ್ಪ ದಿವಸ ಕಷ್ಟ ಇವೆ. ಇಲ್ಲ ಎಂದು ಹೇಳುವುದಿಲ್ಲ. ಇನ್ನೊಂದು ವರ್ಷದವರೆಗೆ ಕಾಯಿರಿ. ನಾನು ಮಾನ್ಯ ಪ್ರಕಾಶ್‌ರವರು ಎರಡು ಮೂರು ಮೀಟಿಂಗ್ ಕುಳಿತು ಇವೆಲ್ಲಾ ಚರ್ಚೆ ಮಾಡಿದ್ದೇವೆ. Kindly wait for another 6-7 months. I will see that at least masterplan is prepared for the whole thing. Y. Kaggal, in the next meeting of the cabinet, it will be approved.

ಶಿವಮೊಗ್ಗ ಜಿಲ್ಲಾ ಎ.ಪಿ.ಎಂ.ಸಿ.ಗೆ ಚುನಾವಣೆ

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳನ್ನು ತಮ್ಮ ಮುಖಾಂತರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲಾ ಎಪಿಎಂಸಿಯದ್ದು ಸುಮಾರು 20-22 ವರ್ಷದಿಂದ ಚುನಾವಣೆ ನಡೆದಿಲ್ಲ. ಬರೀ ಆಡಳಿತಾಧಿಕಾರಿಗಳನ್ನೇ ನೇಮಕ ಮಾಡಿಕೊಂಡು ಬಂದಿದ್ದೇವೆ. ಮತ್ತೆ ಏಪ್ರಿಲ್ 30 ರೊಳಗೆ ಚುನಾವಣೆ ಮಾಡುತ್ತೇವೆ ಎಂದು ಹೈಕೋರ್ಟಿಗೂ ಕೂಡ ಹೇಳಿಕೊಂಡು ಬಂದಿದ್ದೀರಿ. ಅದಕ್ಕೋಸ್ಕರ ತಕ್ಷಣ ಯಾವಾಗ ಚುನಾವಣೆ ಮಾಡುತ್ತೀರಿ ಎಂದು ಹೇಳಬೇಕು. ಏಕೆಂದರೆ ಹಿಂದೆ ಕಾಂಗ್ರೆಸ್ ಸರ್ಕಾರ ಇರಬೇಕಾದರೆ ಆಡಳಿತಾಧಿಕಾರಿಗಳನ್ನೇ ನೇಮಕ ಮಾಡಿಕೊಂಡು ಬಂದರು. ನಿಮ್ಮದು ಮೂರು ವರ್ಷ. ಅವರದ್ದು 19 ವರ್ಷ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಸಹಕಾರಿ ಸಚಿವರು ಬಂದ ತಕ್ಷಣವೇ ತಿಳಿಸುತ್ತೇವೆ. ಈ ಸಮಯದಲ್ಲಿಯೇ ಉತ್ತರವನ್ನು ತರಿಸಿಕೊಡುತ್ತೇನೆ.